[Govt. of Karnataka C.R.P. 67]

| Deposition Sheets<br>(RP.No.57)<br>Form No.4 (Civil) | IN THE COURT OF <u>CIVIL JUDGE & J.M.F.C., KARKALA.</u><br><br>Criminal Case No. 770/2019<br><br>..................................................Vs.................................... |
|---|---|

ಸಾಕ್ಷಿದಾರನ ಹೆಸರು ಃ ಅಶೋಕ್ ಪೂಜಾರಿ ಡಿ.ಡಬ್ಲ್ಯೂಃ 1

ತಂದೆಯ ಹೆಸರುಃ ಬೂದ ಪೂಜಾರಿ

ಪ್ರಾಯ ಃ 50 ವರ್ಷ

ಉದ್ಯೋಗ ಃ ಸೆಂಟ್ರಿಂಗ್ ಕಾಂಟ್ರಾಕ್ಟರ್

ವಾಸ ಃ ಪುತ್ತೂರು, ಉಡುಪಿ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 31-01-2026

<u>ಮುಖ್ಯ ವಿಚಾರಣೆಃ ಆರೋಪಿ ಪರಃ ಶ್ರೀಮತಿ ಕೆ.ಎಸ್. ವಕೀಲರಿಂದಃ</u>

9 ವರ್ಷಗಳ ಹಿಂದೆ ಪಿರ್ಯಾದುದಾರರ ಪರಿಚಯವಾಗಿರುತ್ತದೆ. ಅವರು ಸೆಂಟ್ರಿಂಗ್ ಸಾಮಾನುಗಳನ್ನು ತರುತ್ತಿದ್ದು, ಆ ಮೂಲಕ ಪರಿಚಯವಾಗಿರುತ್ತದೆ. 9 ವರ್ಷಗಳ ಹಿಂದೆ ಪಿರ್ಯಾದುದಾರರ ವಾಹನದಲ್ಲಿ ಸೆಂಟ್ರಿಂಗ್ ಸಾಮಾನುಗಳನ್ನು ತರಿಸಿರುತ್ತೇನೆ. ಆಗ ಪಿರ್ಯಾದುದಾರು ರೂ.20,000/- ಬಾಡಿಗೆ ಆಗಿದೆ ಎಂದು ಹಣ ಕೇಳಿರುತ್ತಾರೆ ನಾನು ನಗದು ಇಲ್ಲ ಎಂದು ಹೇಳಿ, ಅಂಕೆಯಲ್ಲಿ ರೂ.20,000/- ಮೊತ್ತ ಬರೆದು ಚೆಕ್ಕು ಕೊಟ್ಟಿರುತ್ತೇನೆ. 2 ದಿನಗಳ ನಂತರ ನಗದು ಬೇಕು ಎಂದು ಕೇಳಿರುತ್ತಾರೆ. ಆಗ ನಾನು ಚೆಕ್ಕು ವಾಪಸ್ಸು ಕೊಡಿ ನಗದು ಹಣ ಕೊಡುತ್ತೇನೆ ಎಂದು ಹೇಳಿರುತ್ತೇನೆ. ನಂತರ ಪಿರ್ಯಾದುದಾರು ನನ್ನಿಂದ ರೂ.20,000/- ನಗದು ಪಡೆದು ಚೆಕ್ಕು ವಾಪಸ್ಸು ನೀಡುವುದಾಗಿ ಭರವಸೆ ನೀಡಿ ಹೋಗಿರುತ್ತಾರೆ. ನಾನು 5-6 ಬಾರಿ ಪಿರ್ಯಾದುದಾರರನ್ನು ಚೆಕ್ಕು ವಾಪಸ್ಸು ಕೊಡುವಂತೆ ಕೇಳಿರುತ್ತೇನೆ ಅದಕ್ಕೆ ಅವರು ನಾನು ಮೋಸ ಮಾಡುವುದಿಲ್ಲ ವಾಪಸ್ಸು ಕೊಡುತ್ತೇನೆ ಎಂದು ಹೇಳಿರುತ್ತಾರೆ.

ನನಗೆ ಈ ಪ್ರಕರಣದಲ್ಲಿ ವಕೀಲರ ಮೂಲಕ ಯಾವುದೇ ನೋಟೀಸು ಬಂದಿರುವುದಿಲ್ಲ. ನನಗೆ ಹಾಗೂ ಪಿರ್ಯಾದುದಾರಿಗೆ ಹಣದ ವ್ಯವಹಾರ ಇರುವುದಿಲ್ಲ.

ನಿಪಿ-1 ರಲ್ಲಿ ರೂ. 20,000/- ಮೊತ್ತವನ್ನು ಅಂಕೆಯಲ್ಲಿ ನಾನು ಬರೆದಿರುತ್ತೇನೆ. ಪಿರ್ಯಾದುದಾರು ನನ್ನ ವಿರುದ್ಧ ಪ್ರಕರಣ ದಾಖಲಿಸಿದ ಬಗ್ಗೆ ಪೋಲಿಸರು ವಾರೆಂಟ್ ತೆಗೆದುಕೊಂಡು ಬಂದಾಗ ಗೊತ್ತಾಗಿರುತ್ತದೆ. ಪಿರ್ಯಾದುದಾರರಿಗೆ ನನಗೆ ಹಣ ಕೊಡುವಷ್ಟು ಸಾಮರ್ಥ್ಯ ಇರುವುದಿಲ್ಲ. ಆದ್ದರಿಂದ ನನ್ನ ವಿರುದ್ಧದ ಈ ಪ್ರಕರಣವನ್ನು ವಜಾಗೊಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲುಃ ಪಿರ್ಯಾದುದಾರರ ಪರಃ ಶ್ರೀ.ಪಿ.ಎ.ಎಸ್. ರವರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ